5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ.93/2022

ದಿನಾಂಕ ಃ 14.10.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಪಿ. ಡಬ್ಲ್ಯೂ:1

ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಎಂ ಎನ್ ವಕೀಲರಿಂದಃ

ಶ್ರೀ ಹೆಚ್ ಎಂ ಎನ್ ವಕೀಲರು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೊಂದು ಪ್ರಕರಣದ ದಾಖಲಾತಿಗಳನ್ನು ಪಡೆದು ಪಾಟೀ ಸವಾಲು ಮಾಡಬೇಕಾಗಿದೆ ಎಂದು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಅವಕಾಶ ಕೋರುತ್ತಾರೆ. ಈ ಪ್ರಕರಣವು 2022 ನೇ ಸಾಲಿನದಾಗಿದ್ದು ಪ್ರಸ್ತುತ ಸಾಕ್ಷಿಯನ್ನು 15.09.2022 ರಂದು ವಿಚಾರಣೆ ಮಾಡಿ, ಆರೋಪಿ ಪರ ವಕೀಲರು ಗೈರು ಹಾಜರಿದ್ದರೂ ಸಹ ನ್ಯಾಯಾದ ದೃಷ್ಟಿಯಿಂದ 15.09.2025 ಕ್ಕೆ ಮುಂದುಡಲಾಗಿತ್ತು. ದಿನಾಂಕ 16.04.2025 ರಂದು ಪ್ರಾಸಾ.1 ರವರು ಅನಾರೋಗ್ಯದಿಂದ ಇದುದ್ದರಿಂದ ಅವರ ಪಾಟೀ ಸವಾಲನ್ನು ಈ ದಿನಕ್ಕೆ ಮುಂದುಾಡಲಾಗಿತ್ತು. ಸದರಿ ಪ್ರಕರಣದಲ್ಲಿ ದಾಖಲಾತಿ ಪಡೆದುಕೊಳ್ಳಲು ಸಾಕಷ್ಟು ಸಮಯವಿದ್ದಾಗಿಯು ದಾಖಲಾತಿ ಪಡೆದುಕೊಳ್ಳದೇ, ಆರೋಪಿ ಪರ ವಕೀಲರು ಈ ದಿನ ದಾಖಲಾತಿಗಳನ್ನು ಪಡೆಯ ಬೇಕಾಗಿದೆ ಹಾಗೂ ನಂತರದಲ್ಲಿ ಪಾಟೀ ಸವಾಲನ್ನು ಮಾಡಬೇಕಾಗಿದೆ, ಆದುದರಿಂದ ಸಮಯ ಅವಕಾಶ ನೀಡಬೇಕು ಎಂಬ ಕಾರಣವು ಸಕಾರಣವಾಗಿರುವುದಿಲ್ಲ. ಆದುದರಿಂದ ಸಾಕ್ಷಿಯ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.